ಬಂದಿದ್ದನೆಂಬಂತೆ ನೆನೆದರೇ ಹೊರತು ಸ್ಪಷ್ಟವಾಗಿ ಏನೂ ತಿಳಿಯಲಿಲ್ಲ. ಆ ಮನೆಯ ಹತ್ತಿರವೇ ರಾವ್‌ಜೀಭಾಯಿಯ ಖಾತೆಯಿದ್ದ ಸಹಕಾರೀ ಬ್ಯಾಂಕು ಇತ್ತು, ಅಲ್ಲಿ ಹೋಗಿ ವಿಚಾರಿಸಿದಾಗ ನಿನ್ನೆ ಸಂಜೆ, ಬ್ಯಾಂಕಿನ ಸಂಜೆಯ ಪಾಳಿ ಆರಂಭವಾದ ಕೆಲವು ನಿಮಿಷಗಳಲ್ಲೇ ರಾವ್‌ಜೀಭಾಯಿ ಅಲ್ಲಿಗೆ ಬಂದಿದ್ದನೆಂದೂ, ತನ್ನ ಖಾತೆಯಿಂದ ಆರು ಸಾವಿರ ರೂಪಾಯಿಯಷ್ಟು ದೊಡ್ಡ ಮೊತ್ತದ ಹಣ ತೆಗೆಸಿದನೆಂದೂ, ಯಾಕೆಂದು ಕೇಳಿದಾಗ ತೀರ್ಥಯಾತ್ರೆಗೆ ಹೊರಟಿರುವ ಕಾರಣ ಕೊಟ್ಟನೆಂದೂ ತಿಳಿಯಿತು.

ಇಷ್ಟು ದಿನ ಬರಿಯೆ ಬಾಯಿಂದ ಆಡಿ ತೋರಿಸಿದ್ದನ್ನು ಈಗ ನಿಜಕ್ಕೂ ಮಾಡಲು ಹೊರಟಿರಬೇಕು ಎನ್ನುವುದು ಜಮಶೇದ –ಫ್ರೇನಿಯರ ತರ್ಕವಾಗಿತ್ತು. ಆ ದಿನ ಅವನು ತಮ್ಮ ಮುಂದೆ ವರ್ಣಿಸಿದ್ದು ತಾನು ಮುಂದೆ ಕೈಗೊಳ್ಳಲಿದ್ದ ಈ ತೀರ್ಥಯಾತ್ರೆಯಾಗಿತ್ತು ಎನ್ನುವುದರ ಬಗ್ಗೆ ಅವರಿಗೆ ಈಗ ಅನುಮಾನವೇ ಉಳಿಯಲಿಲ್ಲ. ಆದರೆ ಈ ಬಗೆಯ ಖಾತರಿ ಅಪ್ಪನ ಅಶಾಂತಿಯ ಸ್ವರೂಪವನ್ನು ಚೆನ್ನಾಗಿ ಬಲ್ಲ ಅವನ ಮಕ್ಕಳಿಗೇ ಇರಲಿಲ್ಲ. ಯಾವ ಊರಿನ ಯಾವೆಲ್ಲ ಕೇರಿಗಳನ್ನು ಸುತ್ತಾಡಲು ಹೊರಟಿರುವನೋ ಎಂದು ತಲ್ಲಣಗೊಂಡ ಅವರಿಗೆ ಅಪ್ಪ ಭೇಟಿಮಾಡಬಹುದಾದ, ವಾಸಿಸಬಹುದಾದ ಜಾಗಗಳ ಕಲ್ಪನೆಯೇ ಉಸಿರು ಕಟ್ಟಿಗೆ ಕಾರಣವಾಯಿತು. ಈ ವಿಲಕ್ಷಣ ನಿರ್ಗಮನಕ್ಕೆ ತಕ್ಷಣದ ಪ್ರೇರಣೆಯಾದ ತೋರಿಕೆಗೆ ಅಷ್ಟೇನೂ ಅದ್ಭುತವಾಗಿರದ. ಆ ಘಟನೆ ಆಕಸ್ಮಿಕಗಳ ಪರಿಣಾಮವಾಗಿದೆ ಎನ್ನುವ ತಮ್ಮ ತಿಳಿವಳಿಕೆಯಲ್ಲಿ ಸೋರಾಬ–ಜಾಧವ–ಮ್ಯಾಕೆಲ್‌ರಿಗೆ ದೃಢವಾದ ವಿಶ್ವಾಸವಿದ್ದ ಹಾಗಿತ್ತು. ಆದರೆ ಅದನ್ನು ಕುರಿತು ಚರ್ಚೆ ಮಾಡುತ್ತಿದ್ದ ಹಾಗೆ ಆಕಸ್ಮಿಕಗಳನ್ನು ನೋಡುವ ತಮ್ಮ ದೃಷ್ಟಿಯಲ್ಲೇ ದೊಡ್ಡ ಬದಲಾಗುತ್ತಿದೆ ಎನ್ನುವ ಅರಿವೂ ಮೂಡಹತ್ತಿತು.

'ಬ್ಯಾಂಡ್ ಸ್ಟ್ಯಾಂಡ್ ನ್ಯೂಸ್' ಪತ್ರಿಕೆಯ ವಿಶೇಷ ಸಂಚಿಕೆ ಕೊನೆಗೂ ಒಂದು ದಿನ ಪ್ರಕಟವಾಯಿತು. ಸೋರಾಬ, ಜಾಧವ ಹಾಗೂ ಮ್ಯಾಕೆಲ್‌ರ ಜೊತೆಗೆ ರಾವ್‌ಜೀಭಾಯಿಯ ಮಕ್ಕಳೂ ಹಣದ ಸಹಾಯ ಮಾಡಿದ್ದರಿಂದ ನಾಲ್ಕು ಪುಟಗಳ ಬದಲು ಎಂಟು ಪುಟಗಳಿಗೆ ಬೆಳೆದಿತ್ತು. ಮೊದಲು ಯೋಜಿಸಿದ ಒಂದು ಸಾವಿರ ಪತ್ರಿಕೆಗಳ ಬದಲು ಐದು ಸಾವಿರ ಪ್ರತಿಗಳು ಮುದ್ರಿತವಾಗಿದ್ದವು. ಮುಖ ಪುಟದ ಮೇಲೆ ಮ್ಯಾಕೆಲ್ ಗೆಳೆಯನೇ ಬರೆದ ರಾವ್‌ಜೀಭಾಯಿಯ ಹಾಗೂ ಆ ಅಪರಿಚಿತ ಹುಡುಗನ ರೇಖಾ ಚಿತ್ರಗಳಿದ್ದವು. ಇಬ್ಬರನ್ನೂ ಗ್ರಹಿಸಿದ ಚಿತ್ರಕಾರ ಒಬ್ಬನೇ ಆಗಿದ್ದುದಕ್ಕೋ ಏನೋ ಇಬ್ಬರ ಕಣ್ಣುಗಳಲ್ಲಿಯ ವಿಲಕ್ಷಣ ಸಾಮ್ಯ ನೋಡಿದ ಯಾರನ್ನೂ ದಂಗುಬಡಿಸುವ ಹಾಗಿತ್ತು.

ಕಾಲ ಸರಿಯುತ್ತದ್ದ ಹಾಗೆ, ಇನ್ನೂ ಪತ್ತೆಯಾಗಿರದ ರಾವ್‌ಜೀಭಾಯಿಯ ಕತೆ ಬ್ಯಾಂಡ್ ಸ್ಟ್ಯಾಂಡಿನ ಜನವಸತಿಯಲ್ಲಿ ಒಂದು ದಂತಕಥೆಯ ರೂಪ ಧರಿಸತೊಡಗಿದೆ. ಅವನ ಕತೆಯೊಂದಿಗೆ ಪ್ರಕಟಗೊಂಡ ಅಜ್ಞಾತ ಹುಡುಗನ ಚಿತ್ರವನ್ನು ನೋಡಿದವರೆಲ್ಲ ಅವನ ಬಗ್ಗೆ ಆಡಿಕೊಳ್ಳತೊಡಗಿದ್ದಾರೆ. ತನ್ನ ಅಜ್ಜನನ್ನು ಹುಡುಕುತ್ತಾ ಹನ್ನೆರಡು ಮಜಲು ಎತ್ತರದ ಕಟ್ಟಡವೊಂದರ ಗೇಟಿನವರೆಗೂ ಬಂದು, ಅಲ್ಲಿಯ ಪಹರೆಯವನಿಂದ ಅಟ್ಟಲ್ಪಟ್ಟ ಆ ಮುಗ್ಧ ಬಾಲಕನ ನಿಗೂಢ ನೋಟದ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ.

**(ಮುಗಿಯಿತು)**